CC 238/2018

PW-1

ಸಾಕ್ಷಿಗೆ ದಿನಾಂಕಃ 25-06-2026 ರಂದು ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲುಃ 1 ರಿಂದ 3 ನೇ ಆರೋಪಿತರ ಪರ ಶ್ರೀ ಹೆಚ್ ಟಿ ವಕೀಲರಿಂದಃ</u>**

ಆಪಾದಿತ ಘಟನೆಯ ಸಮಯದಲ್ಲಿ ನಾನು ಸಂತೆಬೆನ್ನೂರಿನ ಠಾಣೆಯಲ್ಲಿ ಕೆಲಸ ಮಾಡುತ್ತಿದ್ದೆ, ವಿಶೇಷ ಕರ್ತವ್ಯಕ್ಕಾಗಿ ನನ್ನನ್ನು ಚನ್ನಗಿರಿ ವೃತ್ತ ಕಚೇರಿಗೆ ನಿಯೋಜಿಸಲಾಗಿತ್ತು. ನನ್ನನ್ನು ವಿಶೇಷ ಕರ್ತವ್ಯಕ್ಕೆ ನೇಮಕ ಮಾಡಿದ್ದ ಬಗ್ಗೆ ದಾಖಲೆಗಳನ್ನು ನಾನು ಹಾಜರಪಡಿಸಿಲ್ಲ, ತನಿಖಾಧಿಕಾರಿಯು ಹಾಜರುಪಡಿಸಿರಬಹುದು. ನಾನು ಚನ್ನಗಿರಿಯ ವೃತ್ತ ಕಚೇರಿಯಲ್ಲಿ ಅಪಾದಿನ ಘಟನೆಯ ಸಮಯದಲ್ಲಿ ವಿಶೇಷ ಕರ್ತವ್ಯಕ್ಕೆ ನೇಮಕಗೊಂಡಿದ್ದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-15 ರವರು ನಮಗೆ ಎಸ್ ಎಸ್ ಜ್ಯುಯಲರ್ ಬಳಿ ಹೋಗಲು ಹೇಳಿದಾಗ ಸಮಯ 2.00 ಗಂಟೆಯಾಗಿತ್ತು. ನಾವು ಠಾಣೆಯಿಂದ ಎಸ್ ಎಸ್ ಜ್ಯೂಯಲರ್ ಬಳಿ ಹೋಗಲು ಠಾಣೆಯನ್ನು ನಾನು ಚಾಸಾ-8,9, ಹಾಗೂ 11 ರವರು ಠಾಣೆಯನ್ನು ಮದ್ಯಾಹ್ನ 2.05 ಗಂಟೆಗೆ ಬಿಟ್ಟೆವು. ಘಟನಾ ಸ್ಥಳಕ್ಕೆ 2.10 ಗಂಟೆಗೆ ಹೋದೆವು. ಘಟನಾ ಸ್ದಳ ಠಾಣೆಯಿಂದ 300 ರಿಂದ 400 ಮೀಟರ್ ದೂರವಿರುತ್ತದೆ. ಠಾಣಾ ಮುಂಭಾಗದ ರಸ್ತೆಯಿಂದ ನೋಡಿದರೆ ಎಸ್ ಎಸ್ ಜ್ಯೂಯಲರ್ ಕಾಣುತ್ತದೆ ಎಂದರೆ ಸರಿ. ಸ್ಥಳಕ್ಕೆ ನಾವು ಠಾಣಾ ಜೀಪಿನಲ್ಲಿ ಹೋದೆವು. ಘಟನಾ ಸ್ಥಳಕ್ಕೆ ನಡೆದುಕೊಂಡು ಹೋಗಲು ಅವಕಾಶ ಇದ್ದು ನಾವು ಜೀಪಿನಲ್ಲಿ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ನಮಗೆ ಮೇಲಾಧಿಕಾರಿಗಳಿಂದ ಬಂದ ಮಾಹಿತಿ ಮೇರೆಗೆ ನಾನು ಚಾಸಾ-8,9 ಮತ್ತು 11 ರವರು ಸ್ಥಳಕ್ಕೆ ಭೇಟಿ ನೀಡಿದೆವು ಎಂದು ಈ ಪ್ರಕರಣಕ್ಕಾಗಿ ಸೃಷ್ಟಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿತರು ನಾವು ಸ್ಥಳಕ್ಕೆ ಹೋದಾಗ ಜ್ಯೂಯಲರ್ ಹೊರಗೆ ಇದ್ದರು. ನಾನು ಹೇಳುವ ಹಾಗೆ ದಿಃ 28-03-2017 ರಂದು ಆರೋಪಿತರು ಎಸ್ ಎಸ್ ಜ್ಯುಯಲರ್ ಬಳಿ ಬಂದಿರಲಿಲ್ಲ ಹಾಗೂ ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಯಾರು ಯಾರು ಯಾವ ಬೈಕಿನಲ್ಲಿ ಬಂದಿದ್ದರು ಎಂದು ನಿಖರವಾಗಿ ಹೇಳಲಾಗುವುದಿಲ್ಲ. ಪ್ಯಾಶನ್ ಪ್ರೋ ಬೈಕ್‌ನಲ್ಲಿದ್ದ ಆಭರಣಗಳನ್ನು ಅಮಾನತುಪಡಿಸಿಕೊಂಡೆವು. ಪ್ಯಾಶನ್ ಪ್ರೊ ಬೈಕ್‌ನಲ್ಲಿ ಆಭರಣಗಳು ಇದ್ದವು ಎಂದು ನನ್ನ ಹೇಳಿಕೆಯಲ್ಲಿ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ಅಮಾನತುಪಡಿಸಿಕೊಂಡ ಅಭರಣಗಳು ಪ್ಯಾಶನ್ ಪ್ರೋ ಬೈಕಿನಲ್ಲಿದ್ದವು ಎಂದು ತೋರಿಸಲು ಪೊಟೋವನ್ನು ತೆಗೆಯಲಿಲ್ಲ, ಮಹಜರು ವೇಳೆಯಲ್ಲಿ ತೆಗೆದಿರುತ್ತೇವೆ. ಆರೋಪಿತರು ಸ್ಥಳಕ್ಕೆ ಬಂದಿರಲಿಲ್ಲ

ಹಾಗೂ ಯಾವುದೇ ಆಭರಣಗಳನ್ನು ತಂದಿಲ್ಲದೆ ಇದ್ದರಿಂದ ನಾವು ಯಾವುದೇ ಫೋಟೋಗಳನ್ನು ತೆಗೆದಿಲ್ಲ ಎಂದರೆ ಸರಿಯಲ್ಲ.

ಚಾಸಾ-4 ಮತ್ತು 5 ರವರನ್ನು ಚಾಸಾ-9 ರವರು ಕರೆದುಕೊಂಡು ಬಂದರು. ಚಾಸಾ-4 ಮತ್ತು 5 ರವರನ್ನು ಸ್ಥಳಕ್ಕೆ ಕರೆದುಕೊಂಡು ಬಂದು ಮಹಜರು ಮಾಡಿರುತ್ತೇವೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಕಳ್ಳತನದ ವಸ್ತುಗಳನ್ನು ಮಾರಾಟ ಮಾಡಲು ಬಂದಿದ್ದರು ನಾವು ಅವುಗಳನ್ನು ಪಂಚರಾದ ಚಾಸಾ-4 ಮತ್ತು 5 ರವರ ಸಮಕ್ಷಮ ಅಮಾನತುಪಡಿಸಿಕೊಂಡೆವು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಈ ವಿಚಾರವಾಗಿ ಯಾವುದೇ ಹೇಳಿಕೆಯನ್ನು ನೀಡಿಲ್ಲ ಎಂದರೆ ಸರಿಯಲ್ಲ. ಆರೋಪಿತರಿಗೆ ತೊಂದರೆಕೊಡುವ ಉದ್ದೇಶದಿಂದ ನಾನು ಮತ್ತು ನಮ್ಮ ಮೇಲಾಧಿಕಾರಿಗಳು ಸೇರಿ ಆರೋಪಿತರು ಕಳ್ಳತನದ ಆಭರಣಗಳನ್ನು ಮಾರಾಟ ಮಾಡಲು ಬಂದಿದ್ದರು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮುದ್ದೆಮಾಲುಗಳಿಗೂ ಆರೋಪಿತರಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ನಾವು ಅಮಾನತುಪಡಿಸಿಕೊಂಡೆವು ಎಂದು ಹೇಳಲಾಗದ ಮೋಟಾರ್ ಬೈಕ್ ಗಳಿಗೂ ಆರೋಪಿತರಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ.

(3ನೇ ಆರೋಪಿಯು 1 ಮತ್ತು 2 ನೇ ಆರೋಪಿತರ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವಂತೆ ಕೋರಿಕೊಂಡ ಮೇರೆಗೆ ಅಳವಡಿಸಿಕೊಳ್ಳಲಾಯಿತು. )

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪರಿಸಲಾಯಿತು.)

**ಓ ಹೇ ಕೇ ಸರಿಯಿದೆ.**

2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್ ಸಿ, ಚನ್ನಗಿರಿ